ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ ''೧೯೬೮ನೇ ಮಾರ್ಚ್ ೩೧ರ ಅಂತ್ಯದೊಳಗೆ ದೊರಕಲಿರುವ ಪೂರಕ ಅನುದಾನ ಸಂಖ್ಯೆ: ೧, ೨, ೩, ೫, ೬, ೭, ೧೦ ರಿಂದ ೧೪, ೨೨, ೨೩, ೨೯, ೩೨, ೩೪, ೩೫, ೩೫, ೪೧, ೪೫, ೪೬, ೪೮, ೫೫, ೫೮, ೬೨, ೬೩, ೬೫, ೬೭, ೬೮, ೭೪, ೭೫, ೭೮, ೭೯, ಹಾಗೂ ೬೫ನೇ ಸಂಖ್ಯೆಗಳ ಬೇಡಿಕೆಗಳ ಬಗ್ಗೆ ಸರ್ಕಾರದವರು ಸದರಿ ವಚ್ಚವನ್ನು ಸಂದಾಯ ಮಾಡುವಂತಾಗಲು ಪೂರಕ ಅನುದಾನ ಪಟಿಯಲ್ಲಿ ಸೂಚಿಸಿದ ಮೊಬಲಗುಗಳನ್ನು ಮಂಜೂರು ಮಾಡುವುದು.''

(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಹಾಗೂ ಬೇಡಿಕೆಗಳಿಗೆ ಮಂಜೂರಾತಿದೊರಕಿತು)

ಶ್ರೀ ಯು, ಭೂಪತಿ.—ಈಗ ಅರ್ಧ ಗಂಟೆ ಚರ್ಚೆ ಇದೆ.

ಅಧ್ಯಕ್ಷರು.—ಈಗ ಈ ವಿಶ್ವವಿದ್ಯಾಲಯದ ಶಿಕ್ಷಕರ ಬಗ್ಗೆ ವಿಧಾನ ಪರಿಷತ್ತಿನಿಂದ ಆಂಗೀಕೃತ ಹಾಗಿ ಬಂದಿರುವ ವಿಧೇಯಕವನ್ನು ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹೌದು ಕೌನ್ಸಿಲ್‌ನಿಂದ ಇದು ಬಂದಿದೆ. ಇದಕ್ಕೆ ನಾವು ವಿರೋಧ ಮಾಡಬೇಕು ಎಂದು ಅಲ್ಲ. ಇದರಲ್ಲಿ ಬೇರೆ ಜನರಿಗೆ ಅಡೆ ತೆಡೆಗಳು ಆಗುತ್ತವೆ. ಹೊಸದಾಗಿ ಲೆಕ್ಚರರ್ಸ್ ಅನ್ನು ಅಪಾಯಿಂಟ್ ಮಾಡಬೇಕೆಂದರೆ ಅವಕಾಶ ಸಿಗುತ್ತಿಲ್ಲ. ಈಗ ಹೊಸದಾಗಿ ಅಪಾಯಿಂಟ್‌ಮೆಂಟನ್ನು ಸಾರಾಸಗಟು ತಂದರೆ ಸರಿಯಲ್ಲ. ಇದನ್ನು ವಿತ್ ಹೆಲ್ಡ್ ಮಾಡಿ, ಇದರ ಬಗ್ಗೆ ಚರ್ಚೆ ಮಾಡಿ ಅದರ ನಂತರ ಇದನ್ನು ಇಡೋಣ.

ಶ್ರೀ ಎ. ಲಕ್ಷ್ಮಿಸಾಗರ್.—ಅವರುಗಳು ತುಂಬಾ ತೊಂದರೆಯಲ್ಲಿದ್ದಾರೆ. ಅದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡಿದ್ದೇವೆ. ಒಂದು ವಾರದ ತನಕ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ, ಅವರೂ ಸಹ ಇದರ ಬಗ್ಗೆ ಪದೇ ಪದೇ ಒತ್ತಾಯ ಮಾಡುತ್ತಿದ್ದರು. ಅವರ ಸಂಸಾರಗಳು ಹಾಳಾಗುತ್ತವೆ. ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಬೇರೆಯವರಿಗೆ ಅನ್ಯಾಯ ಆಗತಕ್ಕ ಪ್ರಶ್ನೆಯನ್ನು ಪರಿಶೀಲನೆ ಮಾಡೋಣ. ಇದು ಆಗದೇ ಹೋದರೆ ಅವರುಗಳಿಗೆ ತುಂಬಾ ತೊಂದರೆ ಆಗುತ್ತದೆ. ಅವರುಗಳು ಸುಪ್ರೀಮ್ ಕೋರ್ಟಿಗೆ ಹೋಗಿದ್ದಾರೆ, ಆರ್ಡರ್ ಆಗಿದೆ. ಇದು ಕನ್ಸಿಲ್‌ನಲ್ಲಿ ಒಪ್ಪಿಗೆ ದೊರೆತಿದೆ. ನಿಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಬಾರಿ ಮಾಡುವಾಗ ತಿದ್ದುಪಡಿ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಎಂ, ಖರ್ಗೆ.—ಯಾರಿಗೋ ತೊಂದರೆ ಅಂದರೆ ಕೆಲವು ಸಂಸಾರಕ್ಕೆ ತೊಂದರೆ ಆಗುತ್ತದೆ ಎಂದು ಬೇರೆ ವರ್ಗದ ಜನಾಂಗಕ್ಕೆ ತೊಂದರೆ ಮಾಡಿದ್ದೀರಿ. You have got dual responsibility to protect their interest also. you have not only to protect the interests of a few families but also you have to protect the interests of other weaker sections who did not have any other opportunity since so many years. ಇದನ್ನು ಬಿಟ್ಟು ನೀವು ತಂದರೆ ಹೇಗೆ? ಕಾಂಟ್ರಾಕ್ಟ್ ಬೇಸಿಸ್‌ನವರು ಇದ್ದಾರೆ. ಪಿ.ಡಬ್ಲ್ಯು.ಡಿ. ನವರು ಇದ್ದಾರೆ, ಕಾರ್ಪೊರೇಷನ್‌ನವರು ಇದ್ದಾರೆ. ಲ್ಯಾಂಡ್ ಆರ್ಮಿನವರು ಕೂಡ ಟೆಂಪೊರರಿ ಅಪಾಯಿಂಟ್‌ನಲ್ಲಿದ್ದಾರೆ ಹೀಗೇ ಎಲ್ಲಾ ಕಡೆ ಟೆಂಪೊರರಿ ಅಪಾಯಿಂಟ್ ಮಾಡಿಕೊಂಡಿರುವವರನ್ನು ನೀವು ರೆಗ್ಯುಲರೈಸ್ ಮಾಡಿದರೆ ಬೇರೆ ಒಂದು ಜನಾಂಗಕ್ಕೆ ಅನ್ಯಾಯ ಮಾಡಿದಂತಾಗಲಿಲ್ಲವೇ?

ಶಾಸನ ರಚನಾ ಕಲಾಪಗಳು

ಅಧ್ಯಕ್ಷರು.—ಮೊದಲು ಮಾನ್ಯ ಮಂತ್ರಿಗಳು ವಿಧೇಯಕವನ್ನು ಮುಂಡನೆ ಮಾಡಲಿ ನಂತರ ನೀವು ಮಾತನಾಡಬಹುದು.

1987ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲೀನೀಕರಣ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ೧೯೮೭ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಶಿಕ್ಷಕರ (ಹಂಗಾಮಿ ಉಪನ್ಯಾಸಕರ ವಿಲೀನೀಕರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ಕಳೆದ ಇಪ್ಪತ್ತು ವರ್ಷಗಳಿಂದ ನವಿ ವಿಶ್ವವಿದ್ಯಾನಿಲಯಗಳಲ್ಲಿ ಹಂಗಾಮಿಯಾಗಿ ಕೆಲಸ ಮಾಡಿಕೊಂಡು ಬಂದಿರುವ ಉಪನ್ಯಾಸಕರುಗಳನ್ನು ಖಾಯಂ ಮಾಡುವ ವಿಚಾರದಲ್ಲಿ ಈಗಾಗಲೇ ಬೆಂಗಳೂರು ವಿಶ್ವವಿದ್ಯಾನಿಲಯದವರು ಕ್ರಮ ತೆಗೆದುಕೊಂಡು ಖಾಯಂ ಮಾಡಿದ್ದಾರೆ. ಅದೇ ರೀತಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿರುವವರನ್ನು ಖಾಯಂ ಮಾಡತಕ್ಕಂಥ ಒಂದು ಪ್ರಯತ್ನದಲ್ಲಿ ಈಗಾಗಲೇ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಮಂತ್ರಿಗಳು ಸರಿಯಾಗಿ ಓದಿಕೊಂಡು ಬಂದಿಲ್ಲ. I am sorry. I have to say that the Government has vested interest in this.

ಶ್ರೀ ಬಿ. ಸೋಮಶೇಖರ್.—ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ೬೩, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೬೮, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ೮೧ ಹೀಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಷ್ಟೊಂದು ಆತುರ ಏತಕ್ಕೆ? ನಾಳೆ ಬೇಕಾದರೆ ಇದನ್ನು ತೆಗೆದುಕೊಳ್ಳಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಇವೊತ್ತಿನ ಅಜೆಂಡಾದಲ್ಲಿದೆ. ಆದ್ದರಿಂದ ಇವೊತ್ತು ಇದನ್ನು ತೆಗೆದುಕೊಳ್ಳಬಹುದು. ತಾವು ಕೋಪ ಮಾಡಿಕೊಂಡರೆ ಏನು ಪ್ರಯೋಜನ? ಇದರ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಕೊಡಿ. You can have your say.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಇಲ್ಲಿ ನಾವು ಏನೇ ಹೇಳಿದರೂ ಸಹ ನೀವು ಪಾಸ್ ಮಾಡಿಕೊಳ್ಳುತ್ತೀರಿ. You do not want to consider it on compassionate grounds You must use your discretion in judicious manner.

ಶ್ರೀ ಬಿ. ಸೋಮಶೇಖರ್.—ಇದರ ಬಗ್ಗೆ ನಾವು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳನ್ನು ಕರೆಸಿ ಚರ್ಚೆ ಮಾಡಿದ್ದೇವೆ. ಇದರ ಜೊತೆಗೆ ನ್ಯಾಯಾಂಗ ಇಲಾಖೆಯ ಜೊತೆಗೆ ಸಹ ಚರ್ಚೆ ಮಾಡಿದ್ದೇವೆ. ಇದನ್ನು ಪಾಸ್ ಮಾಡುವುದರಿಂದ ಯಾವ ರೀತಿಯ ತೊಡಕು ಸಹ ಉಂಟಾಗುವುದಿಲ್ಲ. ಆದ್ದರಿಂದ ಮಾನವೀಯತೆ ದೃಷ್ಟಿಯಿಂದ ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ವೀರಪ್ಪ ಮೊಯ್ಲಿ.—ಇದರಲ್ಲಿ ಮಾನವೀಯತೆ ಪ್ರಶ್ನೆ ಜೊತೆಗೆ ಕಾನೂನು ತೊಡಕಿನ ಪ್ರಶ್ನೆ ಸಹ ಇದೆ

ಶ್ರೀ ಬಿ. ಸೋಮಶೇಖರ್.—ಕಳೆದ ಅನೇಕ ವರ್ಷಗಳಿಂದ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದವರನ್ನು ಖಾಯಂ ಮಾಡುವುದು ಮಾನವೀಯತೆ ದೃಷ್ಟಿಯಿಂದ ಕೂಡಿದೆ. ಆದ್ದರಿಂದ ಇಂತಹ ಒಂದು ಒಳ್ಳೆಯ ಉತ್ತಮವಾದ ಮಸೂದೆಯನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.--ಈ ವಿಧೇಯಕದ ಮೇಲೆ ನಾವೆಲ್ಲರೂ ಮಾತನಾಡಬೇಕಾಗಿದೆ. ಅದ್ದರಿಂದ ಇದನ್ನು ನಾಳೆ ತೆಗೆದುಕೊಳ್ಳುವುದು ಒಳ್ಳೆಯದು. ಈಗ ಬೇಕಾದರೆ ಯಾವುದೇ ಕಾಂಟ್ರವರ್ಸಿಯಲ್ ಇಲ್ಲದ ೩ ಪಂಸೂದೆಗಳನ್ನು ತೆಗೆದುಕೊಂಡು ಪಾಸ್ ಮಾಡೋಣ. ಆದರೆ ಇದನ್ನು ಮಾತ್ರ ನಾಳೆಗೆ ತೆಗೆದುಕೊಂಡು ಎಲ್ಲರೂ ಸಮಾಧಾನದಿಂದ ಚರ್ಚೆ ಮಾಡೋಣ, ನಾಳೆ ಇದನ್ನು ತೆಗೆದುಕೊಂಡರೆ ಇವೊತ್ತು ರಾತ್ರಿ ನಿಮಗೆ ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕೆಂಬ ಜ್ಞಾನೋದಯವಾದರೂ ಆಗಬಹುದು. ನಿಮಗೂ ಸಹ ಯೋಚನೆ ಮಾಡಲು ಸ್ವಲ್ಪ ಸಮಯ ಸಿಗುತ್ತದೆ. ಆದ್ದರಿಂದ ಇದರ ಬದಲಿಗೆ ಈಗ ಬೇರೆ ೩ ಬಿಲ್‌ಗಳನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಆರ್. ಬೊಮ್ಮಾಯಿ,--ಈ ರೀತಿಯ ತೀರ್ಮಾನ ತೆಗೆದುಕೊಳ್ಳುತ್ತಿರುವುದು ಇದೇ ಮೊದಲನೆಯ ಸಲವಲ್ಲ. ನಿಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಸ್ಟೈಫಂಡರಿ ಗ್ರಾಜ್ಯುಯೆಟ್ಸ್‌ನ್ನು ಖಾಯಂ ಮಾಡುವಂತಹ ವಿಚಾರ ಬಂತು. ಆಗ ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಎಸ್. ಸಿ. ಎಸ್. ಟಿ. ಜನರಿಗೆ ಸೂಕ್ತ ಪ್ರಾತಿನಿಧ್ಯ ಕೊಡುವ ಬಗ್ಗೆ ಒಂದು ರೀತಿಯಲ್ಲಿ ಧಕ್ಕೆ ಬಂದರೂ ನೀವು ಒಂದು ಆರ್ಡರ್‌ನ್ನು ಹೊರಡಿಸಿದಿರಿ. ಆದೇರೀತಿ ಈಗಲೂ ಸಹ ಇವರುಗಳನ್ನು ಖಾಯಂ ಮಾಡುವಂತಹ ಒಂದು ಅನಿವಾರ್ಯ ಪರಿಸ್ಥಿತಿ ಬಂದಿದೆ. ಅಂತಹ ಒಂದು ಒತ್ತಡಕ್ಕೆ ಈ ಸರ್ಕಾರ ಒಳಗಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.--ನಮ್ಮ ಕಾಲದಲ್ಲಿ ಯಾವುದೇ ಆಜ್ಞೆಯನ್ನು ರಾಜ್ಯಾಂಗಕ್ಕೆ ವಿರುದ್ಧವಾಗಿ ಹೊರಡಿಸಿಲ್ಲ. ನಾವೆ ರೋಸ್ಟರ್ ಸಿಸ್ಟಮ್‌ನ್ನು ಒಪ್ಪಿಕೊಂಡ ಮೇಲೆ ಅದನ್ನು ಮುರಿದು ಯಾವುದೇ ಶಾಸನವನ್ನು ಮಾಡಲಿಲ್ಲ ಮತ್ತು ಯಾರನ್ನೂ ಸಹ ಖಾಯಂ ಮಾಡಲಿಲ್ಲ. ಆದರೆ ನೀವು ಮಾಡುವುದಿದ್ದರೆ ಕರ್ನಾಟಕದ ಇತಿಹಾಸದಲ್ಲಿ ಇದೇ ಪ್ರಥಮ, ಆದ್ದರಿಂದ ಆಲೋಚನೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.--ನಾನು ತೋರಿಸುತ್ತೇನೆ, ಸ್ಟೈಫಂಡರೀಸ್ ರಿಸರ್ವೇಷನ್‌ಗೆ ಹೈಕೋರ್ಟಿಗೆ ಹೋಗಿ ಸ್ಟೇ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.--ರೋಸ್ಟರ್ ಸಿಸ್ಟಮನ್ನು ಮುರಿದು ರೆಗ್ಯುಲರೈಸ್ ಮಾಡಿರುವುದನ್ನು ತೋರಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.--ಆಸ್ ಫಾರ್ ಆಸ್ ಪಾಸಿಬಲ್ ರೋಸ್ಟರ್ ಸಿಸ್ಟಂ ಉಳಿಸಿಕೊಂಡು ಬರಬೇಕು ಎಂದು ಸರ್ಕಾರದ ಇಚ್ಛೆ ಇದೆ ಸರ್ಕಾರ ಇದಕ್ಕೆ ವಿರೋಧವಾಗಿಲ್ಲ. ಕಳೆದ ೨೦ ವರ್ಷಗಳಲ್ಲಿ ಇಂತಹ ಒಂದು ಒತ್ತಡ ಬಂದಿದೆ ಸರ್ಕಾರಕ್ಕೆ. ಆದು ಪಿಡಬ್ಲ್ಯೂಡಿಯಲ್ಲಿ ಬಂದಿತ್ತು...

ಶ್ರೀ ಎಂ. ಎಸ್. ಕೃಷ್ಣನ್.--ತಾವು ಏಕೆ ಫೋರ್ಸ್ ಮಾಡುತ್ತಿದ್ದೀರಿ? ನಾವು ನಿಮಗೆ ವಿರೋಧವಾಗಿಲ್ಲ ಇದರ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆಯೋ ನಮಗೂ ಅಷ್ಟೇ ಇದೆ. ಬಹಳ ದೊಡ್ಡ ಭಿನ್ನಾಭಿಪ್ರಾಯವಿಲ್ಲ. ಒಂದೆರಡು ಕಾನೂನಿನ ತೊಡಕುಗಳು ಇರಬಹುದು..

ಅಧ್ಯಕ್ಷರು.--ನಾಳೆ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.--ಇದು ಮೊಸ ವಿಚಾರ ಅಲ್ಲ. ರೋಸ್ಟರ್ ಸಿಸ್ಟಮನ್ನು ಕಾಯಬೇಕಾಗುತ್ತದೆ. ಸಂವಿಧಾನದ ಹಕ್ಕುಗಳಿಗೆ ಚ್ಯುತಿ ಬರದಕ್ಕಂಥ ರೀತಿಯಲ್ಲಿ ಮಾಡುವುದಿಲ್ಲ. ನೀವು ಒಂದೆರಡು ವಿಚಾರಗಳನ್ನು ಹೇಳಿದ್ದರೆ ತಿಳಿದುಕೊಳ್ಳಬಹುದಿತ್ತು.

ಶ್ರೀ ಬಿ. ಬಸವಲಿಂಗಪ್ಪ.--ಮಾನ್ಯ ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರಿಗೆ ಮನಸ್ಸು ಇಲ್ಲವೇ? ನಾವು ಹೇಳುವುದರ ಕಡೆ ಗಮನವಿಲ್ಲವೇ ಅವರಿಗೆ? ನಾವು ಅಮೆಂಡ್‌ಮೆಂಟ್ ಏನು ಕೊಟ್ಟಿದ್ದೇವೆ ಅದನ್ನು ಒಪ್ಪಿಕೊಂಡು ಬಿಟ್ಟರೆ ಆಯಿತು.

ಅಧ್ಯಕ್ಷರು.--ಇದನ್ನು ನಾಳೆ ತೆಗೆದುಕೊಳ್ಳೋಣ. ನಾಳೆ ಮುಂದಿನ ವಿಧೇಯಕವನ್ನು ತೆಗೆದುಕೊಳ್ಳೋಣ.